**ಪ್ರಧಾನಮಂತ್ರಿಗೆ ಆರ್ಡರ್ ಆಫ್ ಒಮಾನ್ ಪ್ರಶಸ್ತಿ ಪ್ರದಾನ (ಫಸ್ಟ್ ಕ್ಲಾಸ್) (ಡಿಸೆಂಬರ್ 18, 2025)**

ಡಿಸೆಂಬರ್ 18, 2025

ಭಾರತ-ಒಮಾನ್ ಸಂಬಂಧಗಳಿಗೆ ಅಸಾಧಾರಣ ಕೊಡುಗೆಗಾಗಿ ಮತ್ತು ಅವರ ದೂರದೃಷ್ಟಿಯ ನಾಯಕತ್ವಕ್ಕಾಗಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ಗೌರವಾನ್ವಿತ ಒಮಾನ್ ಸುಲ್ತಾನ್ ಹೈಥಮ್ ಬಿನ್ ತಾರಿಕ್ ಅವರು 'ಆರ್ಡರ್ ಆಫ್ ಒಮಾನ್ (ಫಸ್ಟ್ ಕ್ಲಾಸ್)' ಪ್ರಶಸ್ತಿಯನ್ನು ಪ್ರದಾನ ಮಾಡಿದರು.

2. ಪ್ರಧಾನಮಂತ್ರಿಯವರು ಈ ಗೌರವವನ್ನು ಎರಡೂ ದೇಶಗಳ ನಡುವಿನ ಪ್ರಾಚೀನ ಸ್ನೇಹ-ಬಾಂಧವ್ಯಕ್ಕೆ ಅರ್ಪಿಸಿದರು ಮತ್ತು ಇದು ಭಾರತದ 1.4 ಬಿಲಿಯನ್ ಜನರು ಮತ್ತು ಒಮಾನ್ ಜನರ ನಡುವಿನ ಆತ್ಮೀಯತೆ ಮತ್ತು ಸ್ನೇಹಕ್ಕೆ ಸಂದ ಗೌರವವಾಗಿದೆ ಎಂದರು.

3. ಪ್ರಧಾನಮಂತ್ರಿಯವರ ಒಮಾನ್ ಭೇಟಿಯ ಸಂದರ್ಭದಲ್ಲಿ ಈ ಗೌರವವನ್ನು ನೀಡಲಾಗಿರುವುದು, ಎರಡೂ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳ 70 ವರ್ಷಗಳ ಆಚರಣೆಯೊಂದಿಗೆ ಹೊಂದಿಕೊಂಡಿತು, ಮತ್ತು ಈ ಸಂದರ್ಭಕ್ಕೆ ಮತ್ತು ಕಾರ್ಯತಂತ್ರದ ಪಾಲುದಾರಿಕೆಗೆ ಇನ್ನೂ ಹೆಚ್ಚಿನ ವಿಶೇಷ ಮಹತ್ವವನ್ನು ನೀಡಿತು.

4. 1970 ರಲ್ಲಿ ಒಮಾನ್‌ನ ಸುಲ್ತಾನ್ ಖಾಬೂಸ್ ಬಿನ್ ಸೈದ್ ಅವರು ಸ್ಥಾಪಿಸಿದ ಆರ್ಡರ್ ಆಫ್ ಒಮಾನ್(ಫಸ್ಟ್ ಕ್ಲಾಸ್) ಪ್ರಶಸ್ತಿಯನ್ನು ಸಾರ್ವಜನಿಕ ಜೀವನ ಮತ್ತು ದ್ವಿಪಕ್ಷೀಯ ಸಂಬಂಧಗಳಿಗೆ ನೀಡಿದ ಕೊಡುಗೆಯನ್ನು ಗುರುತಿಸಿ ಆಯ್ದ ಜಾಗತಿಕ ನಾಯಕರಿಗೆ ನೀಡಲಾಗುತ್ತದೆ.

ಮಸ್ಕತ್

ಡಿಸೆಂಬರ್ 18, 2025